# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 131/2022

ಚಾ.ಸಾಃ 08 ಪ್ರಾ.ಸಾಃ 04

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 25.09.2025

| | | |
|---|---|---|
| ಸಾಕ್ಷಿಯ ಹೆಸರು | : | ಗೌರಮ್ಮ |
| ಗಂಡನ ಹೆಸರು | : | ಶಿವಪ್ಪ |
| ವಯಸ್ಸು | : | 19 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಆಕಳಕುಂಪಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾಸಾ.1 – ಶಿವಮ್ಮ ನನ್ನ ತಾಯಿ. ಚಾಸಾ.6 – ಅಯ್ಯಣ್ಣ ನನ್ನ ತಂದೆ. ಚಾಸಾ.7 – ರಂಗನಾಥ ತಮ್ಮ. ನ್ಯಾಯಾಲಯದಲ್ಲಿರುವ ಆರೋಪಿ ಗೊತ್ತು. ಆರೋಪಿಯ ಮನೆ ನಮ್ಮ ಮನೆಯ ಪಕ್ಕದಲ್ಲಿ ಇದೆ.

02. ಈಗ ನಾಲ್ಕು ವರ್ಷಗಳ ಹಿಂದೆ ಚಾಸಾ-7 ಆರೋಪಿತನ ಮಗನನ್ನು ಎತ್ತಿಕೊಂಡು ಬೀಳಿಸಿದ್ದರಿಂದ, ಆರೋಪಿತನು ಜಗಳ ಮಾಡಿದನು. ಎಲ್ಲರೂ ಬುದ್ಧಿಮಾತು ಕೇಳಿದರು.

03. ಒಂದು ತಿಂಗಳು ಅಥವಾ ಎರಡು ತಿಂಗಳ ನಂತರ ಜಗಳವಾಡುವುದು ಒಳ್ಳೆದು ಅಲ್ಲ ಎಂದು ನಾವು ಊರು ಬಿಟ್ಟು ಗದ್ವಾಲಕ್ಕೆ ಬಂದೆವು. ನಂತರ ಒಂದು ತಿಂಗಳು, ಎರಡು ತಿಂಗಳ ನಂತರ ಮತ್ತೆ ಊರಿಗೆ ಬಂದೆವು. ನಾವು ಊರಿಗೆ ಬಂದಾಗ 05.00 ಗಂಟೆ ಆಗಿತ್ತು. ಮಗುವನ್ನು ಬೀಳಿಸಿ ಜಗಳವಾದಾಗ ಎರಡು ತಿಂಗಳ ನಂತರ ನಾವು ಊರಿಗೆ ಹೋಗಿದ್ದೆವು. ಸಾಕ್ಷಿ ಮತ್ತೆ ಹೇಳುತ್ತಾರೆ ಎರಡು ದಿನ ಆದ ಮೇಲೆ

ಊರಿಗೆ ಹೋಗಿದ್ದೆವು. ನಾವು ಒಂದು ತಿಂಗಳು, ಎರಡು ತಿಂಗಳು ಆದ ಮೇಲೆ ನಾವು ಊರಿಗೆ ವಾಪಸ್ಸು ಬಂದೆವು. ಆಗ ನಾವು ಬಂದಾಗ 05.00 ಗಂಟೆ ಆಗಿತ್ತು, ಸಂಜೆ ಆಗಿತ್ತು. 07.00 ಗಂಟೆಗೆ ನಮ್ಮ ಜೊತೆ ಜಗಳ ಮಾಡಿ, ಚಾಕು ತೆಗೆದುಕೊಂಡು ಬಂದು ಬಲಗಡೆ ಪಕ್ಕೆಗೆ, ಬಲಕೈಗೆ, ಕಾಲಿಗೆ, ತೊಡೆಗೆ ಆರೋಪಿತನು ಹೊಡೆದಿದ್ದಾನೆ. ನಾನು ಜೋರಾಗಿ ಕಿರುಚಿಕೊಂಡೆನು. ಅಕ್ಕ-ಪಕ್ಕದ ಮನೆಯವರು ಬಂದರು. ಬಸವರಾಜ ಬಸವನದೊಡ್ಡಿ, ಹನುಮಂತ್ರಾಯ (ಚಾಸಾ-11, 12) ಬಂದರು, ಅವರು ಬಿಡಿಸಿಕೊಂಡು ಹೋದರು. ನನ್ನ ತಂದೆಗೆ ರಕ್ತ ಹೋಗುತ್ತಿತ್ತು. ರಿಮ್ಸ್ ಆಸ್ಪತ್ರೆಗೆ ತಂದು ಹಾಕಿದರು.

04. ಚಾಕು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ.3 ರ ಚಾಕುವನ್ನು ನೋಡಿ ಗುರುತಿಸಿರುತ್ತಾರೆ.

(ಆರೋಪಿ ಪರ ಶ್ರೀ ಎಸ್.ವಾಯ್ ವಕೀಲರು ಪಾಟೀ ಸವಾಲಿಗೆ ಅವಧಿ ಕೇಳಿರುತ್ತಾರೆ, ಕಾರಣಗಳಿಲ್ಲದ ಕಾರಣ ಪಾಟೀ ಸವಾಲಿಗೆ ಅವಧಿ ವಿಸ್ತರಿಸಲು ನಿರಾಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.